ದೇವತೆಗಳು ಸರ್ವಶಕ್ತರೆಂದೂ ಸರ್ವಗುಣಸಂಪನ್ನರೆಂದೂ ಎಣಿಕೆಯುಂಟಷ್ಟೆ. ಆದರೆ ಅವರಲ್ಲೂ ಮಿತಿಗಳುಂಟು ಎನ್ನುವುದು ಉಪನಿಷತ್ತಿನ ನಿಲುವು. ದೇವತೆಗಳು ಅಮರರು; ಎಂದರೆ ಮರಣವನ್ನೇ ಗೆದ್ದವರು. ಅವರ ವಾಸವಾದರೋ ಸ್ವರ್ಗದಲ್ಲಿ. ಅಲ್ಲಿ ಯಾವ ಸುಖಕ್ಕೂ ಬರವಿಲ್ಲ; ರೋಗರುಜಿನಗಳ ಬಾಧೆಯೂ ಇಲ್ಲ. ಸದಾ ಸುಖದಲ್ಲಿಯೇ ಮುಳುಗಿ ತೇಲಾಡುವುದಷ್ಟೇ ಅವರ ಪ್ರತಿ ಕ್ಷಣದ ಕೆಲಸ.

ಮನುಷ್ಯರು ದೇವತೆಗಳಿಗೂ ರಾಕ್ಷಸರಿಗೂ ನಡುವೆ ಇರುವಂಥವರು. ಮನುಷ್ಯರಿಗೆ ಯಾವಾಗಲೂ ಕೊರತೆಯದೇ ಚಿಂತೆ; 'ನನ್ನಲ್ಲಿ ಅದಿಲ್ಲ, ಇದಿಲ್ಲ' ಎನ್ನುವುದೇ ಅವರ ನಿತ್ಯಮಂತ್ರ. ಎಷ್ಟಿದ್ದರೂ ಸಾಲದು, ಇನ್ನೂ ಬೇಕು – ಎನ್ನುವ ಹಪಾಹಪಿ. ಇಂದಿಗಷ್ಟೇ ಅಲ್ಲ, ನಾಳೆಗೂ ಅಲ್ಲ, ಮುಂದಿನ ವರ್ಷಕ್ಕೂ, ಅಷ್ಟೇಕೆ ಮುಂದಿನ ಜನ್ಮಕ್ಕೂ ಬೇಕು; ನನಗಷ್ಟೇ ಅಲ್ಲ, ಮಕ್ಕಳಿಗೂ ಮೊಮ್ಮಕ್ಕಳಿಗೂ ಅವರ ಮೊಮ್ಮಕ್ಕಳಿಗೂ ಬೇಕು – ಎಂಬ ಸಂಗ್ರಹಬುದ್ಧಿಯಲ್ಲಿ ಒದ್ದಾಡುವವರು ಮನುಷ್ಯರು.

ಇನ್ನು ರಾಕ್ಷಸರು. ಹಿಂಸೆಯೇ ಅವರ ಪ್ರಧಾನ ಗುಣ. ಕ್ರೌರ್ಯ ಎನ್ನುವುದು ಅವರ ಸಹಜಸ್ವಭಾವ. ಬೇರೆಯವರಿಗೆ ತೊಂದರೆ ಕೊಡುವುದರಲ್ಲಿಯೇ ಅವರಿಗೆ ಸಂತೋಷ. ಇರುವ ಶಕ್ತಿಯನ್ನೆಲ್ಲ ಪರಪೀಡನೆಗಾಗಿ ಮೀಸಲಾಗಿಡುವಂಥ ದುಷ್ಟಬುದ್ಧಿಯ ವಾರಸುದಾರರು ಅವರು. ಒಳ್ಳೆಯದನ್ನು ಕಂಡರೆ ಅವರಿಗೆ ಸಹಿಸಲಾಗದು. ಜಗತ್ತೆಲ್ಲವೂ ಸದಾ ಅಳುತ್ತಿರಬೇಕು; 'ಆ ರೋದನವೇ ನಮ್ಮ ಕಿವಿಗಳಿಗೆ ಮಧುರವಾದ ಸಂಗೀತ' ಎನ್ನುವುದು ಅವರ ಮಾನಸಿಕತೆ.

ದೇವತೆಗಳು, ಮನುಷ್ಯರು, ರಾಕ್ಷಸರು – ಸಹೋದರರಾದರೂ ಪರಸ್ಪರರ ಗುಣಗಳಲ್ಲಿ ಎಷ್ಟೊಂದು ಅಜಗಜಾಂತರ!

ತನ್ನ ಎಲ್ಲ ಮಕ್ಕಳಿಗೂ ಪ್ರಜಾಪತಿ ಸಮಾನವಾಗಿ ಉಪದೇಶಿಸಿದ ಮಾತು: 'ದ'. ಇದು ಒಂದು ಮಾತು ಕೂಡ ಅಲ್ಲ; ಕೇವಲ ಒಂದು ಅಕ್ಷರವಷ್ಟೆ! ಈ ಒಂದು ಅಕ್ಷರವನ್ನೇ ಮೂವರು ಹೇಗೆ ಬೇರೆ ಬೇರೆ ಗ್ರಹಿಸಿದರು? ಏಕಾದರೂ ಹಾಗೆ ಗ್ರಹಿಸಿದರು? – ಇದನ್ನು ನಾವಿಲ್ಲಿ ಮನನ ಮಾಡಬೇಕಾಗುತ್ತದೆ.

ಮೊದಲಿಗೆ ದೇವತೆಗಳ ವಿಷಯವನ್ನು ನೋಡೋಣ. ಪ್ರಜಾಪತಿ ಉಪದೇಶಿಸಿದ 'ದ'ವನ್ನು ಅವರು 'ದಾಮ್ಯತ' ಎಂದು ಅರ್ಥ ಮಾಡಿಕೊಂಡರು. 'ದಾಮ್ಯತ' ಎಂದರೆ 'ದಮ'; ಎಂದರೆ 'ಇಂದ್ರಿಯ ನಿಗ್ರಹ' ಎಂದರ್ಥ. ದೇವತೆಗಳು ತಾವಿರುವುದೇ ಸುಖವನ್ನು ಪಡುವುದಕ್ಕೆ ಎಂದು ತಿಳಿದುಕೊಂಡವರು. ಅವರು ಸದಾ ಭೋಗಾಸಕ್ತರು. ಭೋಗ ಎಂದರೇನು? ಇಂದ್ರಿಯಗಳ ಚಾಪಲ್ಯವೇ ಭೋಗಕ್ಕೆ ಮೂಲ. ಪಂಚೇಂದ್ರಿಯಗಳಿಂದ ಉಂಟಾಗುವ ಕಾಟ ಅಷ್ಟಿಷ್ಟಲ್ಲ. ಕಣ್ಣು ಯಾವಾಗಲೂ 'ಸುಂದರ'ವಾದುದನ್ನೇ ನೋಡಲು ಬಯಸುತ್ತದೆ; ಕಿವಿ ಮಧುರವಾದುದನ್ನೇ ಕೇಳಲು ತವಕಿಸುತ್ತದೆ; ರುಚಿರುಚಿಯಾದುದನ್ನೇ ಚಪ್ಪರಿಸುತ್ತಿರಲು ನಾಲಗೆ ಬಯಸುತ್ತದೆ; ಪರಿಮಳಭರಿತವಾದುದನ್ನೇ ಮೂಗು ಆಘ್ರಾಣಿಸಲು ಉದ್ಯುಕ್ತವಾಗಿರುತ್ತದೆ; ಸುಖವಾದುದನ್ನೇ ಸದಾ ಆಲಂಗಿಸಿಕೊಂಡಿರೋಣವಾಗಲಿ ಎಂದು ಮೈ ಕೋರುತ್ತಿರುತ್ತದೆ. ಸುಖವನ್ನು ಬಯಸುವುದೇ ತಪ್ಪಲ್ಲ; ಆದರೆ ಸುಖವೊಂದೇ ಅನುಭವ – ಎಂದು ತಿಳಿಯುವುದು ತಪ್ಪಾಗುತ್ತದೆ. ಇಂದ್ರಿಯಗಳಿರುವುದು ಕೇವಲ ನಮ್ಮ ಸುಖವನ್ನು ಭೋಗವನ್ನಾಗಿಸುವುದಕ್ಕಷ್ಟೇ ಅಲ್ಲ; ಇಂದ್ರಿಯಗಳ ಸಾರ್ಥಕತೆಯಿರುವುದೂ ಅವುಗಳನ್ನು ಭೋಗದಲ್ಲಿ ಮುಳುಗಿಸುವುದರಲ್ಲಿ ಅಲ್ಲ. ಭೋಗಕ್ಕೆ ಮಿತಿಯಿರಲೇ ಬೇಕು; ಏಕೆಂದರೆ ಭೋಗದ ಮೂಲಸಾಧನವಾದ ಇಂದ್ರಿಯಕ್ಕೇ